


## ಕಾಜೂ ಬಿಸ್ಕಿಟ್

ಅ.29ರ ಸಂಚಿಕೆಯಲ್ಲಿ ಕಿರಣ್ ಕುಮಾರ್ ಕೆ.ಆರ್. ಬರೆದ 'ಕಾಜೂ ಬಿಸ್ಕಿಟ್' ಕತೆ, ಈಗಿನ ಸಮಾಜದಲ್ಲಿ ನಿತ್ಯಾಳಂತಹ ಹುಂಬ ತಿಳಿವಳಿಕೆವುಳ್ಳಯವರಿಂದ ಸಿದ್ರಾಮನಂಥ ಸೀದಾಸಾದಾ ಮನುಷ್ಯರು ಅನುಭವಿಸುವಬೇಕಾಗುವ ತೊಂದರೆಗಳ ಕಟು ಸತ್ಯವನ್ನು ತುಂಬಾ ಸೊಗಸಾಗಿ ಚಿತ್ರಿಸಿದೆ.

—ಜಗನ್ನಾಥ ರೈ, ಮೂಡುಬಿದಿರೆ

ಕಥೆ ಇಂದಿನ ವಾಸ್ತವಕ್ಕೆ ಹಿಡಿದ ಕನ್ನಡಿಯಂತೆ ಇದೆ. ಒಂದೊಂದು ಘಟನೆಗಳೂ ಬೇರೆ ಬೇರೆ ಅಂತ ಅನಿಸಿದರೂ ಕೊನೆಗೆ ಎಲ್ಲವೂ ಒಂದೇ ಅನಿಸುವಂತೆ ಜೋಡಿಸಿರುವ ರೀತಿ ಚೆನ್ನಾಗಿದೆ.

—ಡಾ. ಕೆ ಎಸ್ ಗಂಗಾಧರ, ಶಿವಮೊಗ್ಗ

ಕಥೆ ಸ್ವಾರಸ್ಯಕರವಾಗಿ ಮೂಡಿ ಬಂದಿದೆ. ನಾವು ಬದಲಾಗಬೇಕು. ಪ್ರಪಂಚವೂ ಬದಲಾಗುತ್ತದೆ ಎಂಬ ಸಂದೇಶ ಸಾರುತ್ತದೆ .

—ಎಂ . ಸಂಜೀವ ಕಲಬುರಗಿ

## ಸೋಲಾರ್ ಎವರಿವೇರ್

ಅ.29ರ ಸಂಚಿಕೆಯಲ್ಲಿ ಗುರುರಾಜ್ ಎಸ್. ದಾವಣಗೆರೆ ಅವರು ಬರೆದಿರುವ 'ಸೋಲಾರ್ ಎವರಿವೇರ್' ಲೇಖನ ಓದಿದೆ. ಕೃಷಿ ಮತ್ತು ಬ್ಯುಸಿನೆಸ್ ಕ್ಷೇತ್ರದಲ್ಲಿ ಸೋಲಾರ್ ಬಳಕೆಯ ಕುರಿತು ವಿವರಿಸಿದ್ದಕ್ಕಾಗಿ ಧನ್ಯವಾದಗಳು. ಬಹುತೇಕ ಶಿಕ್ಷಿತರಿಗೆ ಸೌರಶಕ್ತಿಯ ಬಗ್ಗೆ ತಿಳಿದಿಲ್ಲ. ಸರ್ಕಾರವೂ ಈ ಶಕ್ತಿಯನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಕ್ರಮ ಕೈಗೊಳ್ಳುತ್ತಿಲ್ಲ.

—ಹನುಮಂತ್ ಕನ್ನಿಹಾಳ್, ಕಲಬುರ್ಗಿ

ಲೇಖಕರು ಎಲ್ಲ ವಿಧದ ವಿದ್ಯುತ್ ಉತ್ಪಾದನಾ ಕ್ರಮಗಳಲ್ಲಿನ ನಕಾರಾತ್ಮಕ ಅಂಶಗಳನ್ನು ಹೇಳಿದ್ದಾರೆಯೇ ಹೊರತು ಸಕಾರಾತ್ಮಕ ಅಂಶಗಳನ್ನು ಹೇಳಿಲ್ಲ. ಮನೆಯ ಚಾವಣಿಯ ಮೇಲೆಯೇ ಸೋಲಾರ್ ಪ್ಯಾನೆಲ್‌ಗಳನ್ನು ಇರಿಸಿ ವಿದ್ಯುತ್ ಉತ್ಪಾದನೆ ಮಾಡಬಹುದಾಗಿದೆ. ಇದು ಮನೆಯನ್ನು ತಂಪಾಗಿಯೂ ಇಡುತ್ತದೆ. ಈ ವಿಷಯದ ಕುರಿತೂ ಲೇಖನದಲ್ಲಿ ಪ್ರಸ್ತಾಪವಿಲ್ಲ.

—ಹೇಮಂತ್ ಡಿ. ಪೈ, ಬೆಂಗಳೂರು

ಸೋಲಾರ್ ಅಳವಡಿಸಿಕೊಂಡರೆ ತುಂಬಾ ಉಪಯುಕ್ತ. ಇತ್ತೀಚೆಗೆ ಬರುತ್ತಿರುವ ವಿದ್ಯುತ್ ಚಾಲಿತ ಕಾರುಗಳಿಗೆ, ದ್ವಿಚಕ್ರ ವಾಹನಗಳಿಗೆ ಅಳವಡಿಸಿಕೊಳ್ಳಬಹುದಲ್ಲವೇ? ಇದರಿಂದ ಆಗಾಗ 'ಚಾರ್ಜ್' ಮಾಡುವುದು ತಪ್ಪುತ್ತದೆ ಅಲ್ಲವೇ?

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಅಜ್ಞಾತವಾಸ

ನ.5ರ ಸಂಚಿಕೆಯಲ್ಲಿ ಚಿಂತಾಮಣಿ ಕೊಡ್ಲೆಕೆರೆ ಬರೆದ 'ಅಜ್ಞಾತವಾಸ' ಕಥೆ, ಈಗಿನ ಕೊರೊನಾ ಕಾಯಿಲೆಯ ನೈಜತೆಯನ್ನು ಅರ್ಥಪೂರ್ಣವಾಗಿ ಮತ್ತೆ ಹಾಸ್ಯಭರಿತವಾಗಿ ಚಿತ್ರಿಸಿದೆ.

—ಲಕ್ಷ್ಮಣರಾವ್ ಎಂ.ಎಲ್.

## ಅನಾಥ ಶವಗಳ ಬಂಧು

ಅ.29ರ ಸಂಚಿಕೆಯಲ್ಲಿ ಕೆ. ಓಂಕಾರಮೂರ್ತಿ ಅವರು ಬರೆದಿರುವ, 'ಅನಾಥ ಶವಗಳ ಬಂಧು' ಲೇಖನ ಚೆನ್ನಾಗಿದೆ. ಆಯೂಬ್ ಅಹಮದ್ ಅವರ ಕಾರ್ಯ ಶ್ಲಾಘನೀಯ.

—ಶಂಕರ ರಾವ್, ಬೆಂಗಳೂರು

ಒಬ್ಬ ಸಮಾಜ ಸೇವಕ ಮತ್ತು ಅವನ ನಿಸ್ವಾರ್ಥ ಸೇವೆ ಬಗ್ಗೆ ತುಂಬಾ ಚೆನ್ನಾಗಿ ಮೂಡಿಬಂದಿದೆ. ಇದನ್ನು ಪರಿಗಣಿಸಿ ಅವರಿಗೆ ಸರ್ಕಾರ ಸಹಾಯ ಮತ್ತು ಮಾಸಿಕ ಭತ್ಯೆ ನೀಡಬೇಕು

—ನರಸಿಂಹ ರಾವ್, ಬೆಂಗಳೂರು

ಆತ್ಮೀಯ ಆಧುನಿಕ ಹರಿಶ್ಚಂದ್ರ ಆಯೂಬ್ ಅಹಮದ್ ಅವರಿಗೆ ನಮೋನ್ನಮಃ. ನಿಮ್ಮ ಈ ಕರ್ಮವನ್ನು ಅಲ್ಲಾಹುವೇ ನಿಮಗೆ ವಹಿಸಿದ್ದಾನೆ. ನಿಮ್ಮಲ್ಲಿ ಮಾನವೀಯತೆಯ ಕೊಡ ತುಂಬಿ ತುಳುಕುತ್ತಿದೆ. ಅಲ್ಲಾಹು ಎಂದು ನೀವು ಕರೆಯುತ್ತೀರಿ, ಶಿವ ಹರಿ ಗೋವಿಂದ ನಾರಾಯಣ ಎಂದು ನಾವು ಕರೆಯುತ್ತೇವೆ.

ಒಂದೇ ಅಕ್ಕಿಯಿಂದ ಚಿತ್ರಾನ್ನ, ಪಲಾವು, ಬಿರಿಯಾನಿ, ಪಾಯಸ–ನಾನಾ ಖಾದ್ಯ ತಯಾರಿಸುವಂತೆ ದೇವನೊಬ್ಬನೇ ನಾಮ ಹಲವು. ನಿಮ್ಮ ಕುಟುಂಬಕ್ಕೆ ಆ ಭಗವಂತನು ಸಕಲ ಸೌಭಾಗ್ಯಗಳನ್ನು ನೀಡಲಿ

—ವಿಜಯ ಮಂಜುನಾಥ್, ದಾವಣಗೆರೆ

## ನೊಬೆಲ್ ಹಾದಿಯ ರಸಘಟ್ಟಗಳು

ಅ. 29ರ ಸಂಚಿಕೆಯಲ್ಲಿ ಸಿಡ್ಲಿ ಶ್ರೀನಿವಾಸ್ ಬರೆದಿರುವ 'ನೊಬೆಲ್ ಹಾದಿಯ ರಸಘಟ್ಟಗಳು' ಲೇಖನ ಸ್ವಾರಸ್ಯ ಹಾಗೂ ಮಾಹಿತಿಪೂರ್ಣವಾಗಿ ಮೂಡಿಬಂದಿದೆ.

—ಸಂಜೀವಕುಮಾರ್ ಅತಿವಾಳೆ ಬೀದರ,
ಕಾಂತರಾಜ್ ಗಂಡಸಿ, ಹಾಸನ

## ಯಶಸ್ಸಿನ ಮೂರಕ್ಷರ ವಿಜಯ್

ಅ.29ರ ಸಂಚಿಕೆಯಲ್ಲಿ ಬೆಳಚಿಕ್ಕನಹಳ್ಳಿ ಶ್ರೀನಾಥ್ ಬರೆದಿರುವ ನಿರ್ದೇಶಕ ವಿಜಯ್ ಅವರ ಕುರಿತ ಬರಹ ಸೊಗಸಾಗಿತ್ತು. ಒಬ್ಬ ತೆಲುಗಿನ ವ್ಯಕ್ತಿಯ ಕನ್ನಡದ ಬಗೆಗಿನ ಅಭಿಮಾನ ಹಾಗೂ ಕನ್ನಡಿಗರಿಗೆ ವಿಜಯ್ ಅವರ ಸಿನಿಮಾಗಳ ರಸದೌತಣ ಇವೆಲ್ಲವನ್ನು ಬಹಳ ಸಂಯಮದಿಂದ ಲೇಖಕರು ನಿರೂಪಿಸಿದ್ದಾರೆ.

— ಮಧು ಬಿ.ಎನ್., ಜಾರ್ಖಂಡ್

ವೈವಿಧ್ಯಮಯ ಚಿತ್ರಗಳನ್ನು ನಿರ್ದೇಶಿಸಿ ಕನ್ನಡ ಚಿತ್ರಲೋಕವನ್ನು ಉತ್ತುಂಗಕ್ಕೇರಿಸಿದ ವಿಜಯ್ ಅವರಿಗೆ ಕನ್ನಡನಾಡಿನ ಜನತೆಯ ಪರವಾಗಿ ಹೃದಯಪೂರ್ವಕ ಧನ್ಯವಾದಗಳು.

—ಕಿರಣ್ ಕುಮಾರ್ ಯು.ಸಿ., ಶಿವಮೊಗ್ಗ

ಕನ್ನಡ ಚಿತ್ರರಂಗ ಕಂಡ ದೈತ್ಯ ಪ್ರತಿಭೆಗಳಲ್ಲಿ ವಿಜಯ್ ಅವರೂ ಒಬ್ಬರು. ಬಹುಶಃ ನಿರ್ದೇಶನ ಅವರಿಗೆ ಬಂದ ಸಹಜ ಪ್ರತಿಭೆ!

—ರಾಮಚಂದ್ರ ನಾಯಕ, ಬೆಂಗಳೂರು

## ಉತ್ತಮ ಆರೋಗ್ಯ ಲೇಖನ

ಅ. 29 ರ ಸಂಚಿಕೆಯಲ್ಲಿ ಡಾ. ಯುವರಾಜ ಹೆಗಡೆಯವರು ಬರೆದ 'ಹಸಿ ಹಾಲು, ಮಾಂಸಗಳಿಂದಲೂ ಕಾಯಿಲೆ' ಎಂಬ ಲೇಖನ ಚೆನ್ನಾಗಿ ಮೂಡಿಬಂದಿದೆ.

—ಡಾ ಬಸವರಾಜ ಎಸ್ ಗೌಡರ, ಕುಲಗೋಡ

## ವರ್ಣ ಕೌತುಕ

ಅ. 29 ರ ಸಂಚಿಕೆಯಲ್ಲಿ ಪ್ರಕಟವಾದ 'ವರ್ಣ ಕೌತುಕ' (ಪುರಂಜೀವಿ) ವಿಚಾರ ಲಹರಿ ಲೇಖನದಲ್ಲಿ ನೀಲ – ಹಸಿರು ಬಣ್ಣದ ಸಾಂಕೇತಿಕ ಅರ್ಥವನ್ನು ಬಹು ಚೆನ್ನಾಗಿ ತಿಳಿಸಿದ್ದಾರೆ.

—ಶಾಂತಲಾ ರಾಜಗೋಪಾಲ್, ಬೆಂಗಳೂರು

## ಪೊರೆವ ಶಕ್ತಿ

ಅ. 29ರ ಸಂಚಿಕೆಯಲ್ಲಿ ಸ್ವಯಂಪ್ರಭಾ ಅವರು ಬರೆದ ಲೇಖನ 'ಸಾಮಾನ್ಯ ಎನ್ನುವ ಪೊರೆವ ಶಕ್ತಿ' ಲೇಖನ ಮನಮುಟ್ಟುವಂತಿದೆ. ಇದನ್ನು ಎಲ್ಲರೂ ಮನವರಿಕೆ ಮಾಡಿಕೊಳ್ಳಬೇಕು.

—ಶಶಾಂಕ್. ಎನ್., ಕೋಣಂದೂರು

## ಪಂತಲು ಮಾಸ್ತರ ಮಕ್ಕಳರಾಜ್ಯ

ಅ.22ರ ಸಂಚಿಕೆಯಲ್ಲಿ 'ಪಂತುಲು ಮಾಸ್ತರರ ಮಕ್ಕಳರಾಜ್ಯ' ಲೇಖನ ಬರೆದ ಡಿ.ಎನ್. ಸುರೇಶ್ ಅವರಿಗೆ ವಂದನೆಗಳು! ನಾನು ಚಿಕ್ಕವನಿದ್ದಾಗ ಈ ಚಿತ್ರದ ತಾಂತ್ರಿಕ ವೈಭವ ನೋಡಿ ಬೆರಗಾಗಿದ್ದೆ. ಇಂದಿನ ಮಕ್ಕಳು ಈ ಚಿತ್ರ ನೋಡಿದರೆ ದಂಗು ಬಡಿಯುವುದು ಗ್ಯಾರಂಟಿ!

—ಜಿ. ರಾಜಣ್ಣ, ದಾವಣಗೆರೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in